# ಕಾಡಿನ ರಾಜ



ಚಿತ್ರ: ಮಂಜುನಾಥ್ ಹುಲಕೋಟೆ

■ ವೇದಾವತಿ ಎಚ್. ಎಸ್.

ಪ್ರಾಣಿಗಳೆಲ್ಲವೂ ಸೇರಿ ಕತ್ತೆಯನ್ನು ಕಾಡಿನ ರಾಜನನ್ನಾಗಿ ಮಾಡಿದವು. ಕೋತಿ ಮುಖ್ಯಮಂತ್ರಿಯಾಗಿ, ಎತ್ತು ಸೇನಾನಿಯಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದವು. ಕೋಳಿ ಕತ್ತೆಯ ವಿಶೇಷ ಮಿತ್ರನಾಯಿತು. ಹೀಗಾಗಿ ಅವರವರ ಬಂಧುಗಳು ಉತ್ತಮ ಸ್ಥಾನಕ್ಕೆ ಏರಿದರು. ಅವರೆಲ್ಲ ದೊಡ್ಡ ದೊಡ್ಡ ಇಲಾಖೆಯಲ್ಲಿ ಅಧಿಕಾರಿಯಾದರು.

ಕತ್ತೆಗೆ ಕೋಳಿ ಮಾತೆಂದರೆ ಇಷ್ಟವಾಗುತ್ತಿತ್ತು. ಕೋಳಿಯ ಕುಟುಂಬಗಳ ಬಗ್ಗೆ ಕತ್ತೆಗೆ ಎಲ್ಲಿಲ್ಲದ ಪ್ರೀತಿಯೂ ಇತ್ತು. ಅದಕ್ಕೆ ಕಾರಣ ಕೋಳಿಗಳು ಸುಂದರವಾದ ಗೋಲಾಕಾರದಲ್ಲಿ ಮೊಟ್ಟೆಗಳನ್ನು ಇಡುತ್ತವೆಯೆಂಬುದಾಗಿತ್ತು. ಅಲ್ಲದೆ ಅವುಗಳ ಮರಿಗಳು ಮುದ್ದಾಗಿರುವುದನ್ನು ನೋಡಿ ಕತ್ತೆಗೆ ಏನೋ ವಿಶೇಷವಾದ ಅಕ್ಕರೆಯಿತ್ತು.

ಹೀಗಿರುವಾಗ ಕತ್ತೆಗೆ ತಾನೇ ಕಾಡಿಗೆಲ್ಲ ಮಹಾಶಕ್ತಿಶಾಲಿ, ಎಲ್ಲರಿಗಿಂತಲೂ ಪ್ರಭಾವಿ ರಾಜನೆಂದು ಅಹಂಕಾರವುಂಟಾಯಿತು. ತನ್ನ ರಾಜ್ಯದಲ್ಲಿ ಐಕ್ಯತೆಯನ್ನುಂಟು ಮಾಡಲು ಎಲ್ಲರ ಆಚಾರವಿಚಾರ, ಭಾಷೆ, ಮುಂತಾದ ಗುಣಗಳೆಲ್ಲವೂ ಒಂದೇ ರೀತಿಯಾಗಿರಬೇಕೆಂದು ತೀರ್ಮಾನ ಮಾಡಿತು. ಕಾಡಿನಲ್ಲಿದ್ದ ಪ್ರಾಣಿಗಳಿಗೆ ಎಲ್ಲರೂ ತಾನು ಹೇಳಿದ ರೀತಿಯಲ್ಲಿರಬೇಕೆಂದು ಅಜ್ಞೆಯನ್ನು ಹೊರಡಿಸಿತು. ತನ್ನ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಕತ್ತೆ ಸಭೆಯನ್ನು ಕರೆಯಿತು. ಎಲ್ಲಾ ಪ್ರಾಣಿ, ಪಕ್ಷಿಗಳು ತಪ್ಪದೇ ಹಾಜರಾಗಬೇಕೆಂದು ಅಪ್ಪಣೆಮಾಡಿತು.

ಕತ್ತೆಯ ಅಜ್ಞೆಯಂತೆ ಎಲ್ಲಾ ಪ್ರಾಣಿ, ಪಕ್ಷಿಗಳು ಸಭೆಗೆ ಬಂದು ಸೇರಿದವು. ಕತ್ತೆ ವಿಜೃಂಭಣೆಯಿಂದ ಆ ಸಭೆಗೆ ಬಂದು ಎತ್ತರದ ಸಿಂಹಾಸನದಲ್ಲಿ ಕುಳಿತುಕೊಂಡಿತು. ಎತ್ತು, ಕೋತಿ, ಕೋಳಿಗಳು ತಮ್ಮ ತಮ್ಮ ಆಸನಗಳನ್ನು ಅಲಂಕರಿಸಿದವು. ಸಭೆ ಪ್ರಾರಂಭವಾಯಿತು. ರಾಜನಾದ ಕತ್ತೆಯು ಆ ಸಭೆಯನ್ನು ಉದ್ದೇಶಿಸಿ ಮಾತನ್ನು ಪ್ರಾರಂಭ ಮಾಡಿತು. ಅದು ತನ್ನ ಭಾಷಣದಲ್ಲಿ ತನ್ನ ರಾಜ್ಯದ ಐಕ್ಯತೆ ಮತ್ತು ಸಮಾನತೆಯ ಬಗ್ಗೆ ಮಾತನಾಡಿತು. ಕಾಡಿನ ಪ್ರಾಣಿ ಮತ್ತು ಪಕ್ಷಿಗಳಿಗೆ ಕತ್ತೆಯ ಮಾತುಗಳು ಒಪ್ಪಿಗೆಯಾಯಿತು.

ತನ್ನ ಮಾತುಗಳನ್ನು ಮುಂದುವರಿಸುತ್ತ ಕತ್ತೆಯು 'ಪ್ರೀತಿಯ ನನ್ನ ಸಹೋದರ ಸಹೋದರಿಯರೇ, ನೀವೆಲ್ಲರೂ ನನ್ನ ಮಾತುಗಳಿಗೆ ಒಪ್ಪಿಗೆಯನ್ನು ಕೊಟ್ಟಿದ್ದಕ್ಕೆ ನನಗೆ ತುಂಬಾ ಸಂತೋಷವಾಗಿದೆ. ಒಗ್ಗಟ್ಟಿನಿಂದ ನಮ್ಮಲ್ಲಿರುವ ಆಚಾರ ವಿಚಾರಗಳನ್ನು ಒಂದೇ ರೀತಿಯಲ್ಲಿ ತರಲು ಪ್ರಯತ್ನಿಸುತ್ತಿರೆಂದು ನಂಬಿದ್ದೇನೆ. ಇದರಿಂದ ನಮ್ಮ ಮುಂದಿನ ಪೀಳಿಗೆಯವರಿಗೆ ಒಳ್ಳೆಯದಾಗುತ್ತದೆ.

ಇನ್ನು ಮುಂದೆ ಈ ಕಾಡಿನ ಪ್ರಾಣಿಗಳಲ್ಲೂ ಕೆಲವೊಂದು ಬದಲಾವಣೆಗಳಾಗಬೇಕು. ಎಲ್ಲಾರೂ ಒಂದೇ ರೀತಿಯಲ್ಲಿ ಸಂತತಿಯನ್ನು ಪಡೆಯಬೇಕು. ಈ ಕಾಡಿನಲ್ಲಿರುವ ಕೋಳಿಯು ಎಲ್ಲಾ ಪ್ರಾಣಿ ಪಕ್ಷಿಗಳಿಗೆ ಹೋಲಿಸಿದರೆ ಸಾಧು ಮತ್ತು ಸುಂದರವಾಗಿರುವುದರಿಂದ ಅದರಂತೆ ನೀವುಗಳು ಸಹ ಆಗಬೇಕೆಂದು ನನ್ನ ಆಸೆ. ಅದಕ್ಕಾಗಿ ನೀವು ಸಹ ಕೋಳಿಯಂತೆ ಮೊಟ್ಟೆಯನ್ನಿಡಬೇಕೆಂದು ಎಲ್ಲಾ ಪ್ರಾಣಿಪಕ್ಷಿಯಲ್ಲಿ ಕೇಳಿಕೊಳ್ಳುತ್ತೇನೆ' ಎಂದು ದರ್ಪದಿಂದ ನುಡಿಯಿತು.

ಕಾಡಿನ ರಾಜನಾದ ಕತ್ತೆಯ ಮಾತುಗಳನ್ನು ವಿರೋಧ ಮಾಡಲು ಅಲ್ಲಿದ್ದ ಪ್ರಾಣಿಪಕ್ಷಿಗಳಿಗೆ ಸಾಧ್ಯವಿಲ್ಲವಾಗಿತ್ತು. ವಿರೋಧವನ್ನು ಮಾಡಿದರೆ ಶಿಕ್ಷಿಸಲು ಕತ್ತೆಯ ಸೇನಾದಳವಾಗಿದ್ದ ಎತ್ತುಗಳು ಸುತ್ತುವರಿದು ನಿಂತಿದ್ದವು. ಅವುಗಳ ಕೋಡುಗಳು ವಿರೋಧಿಸುವವರನ್ನು ಶಿಕ್ಷಿಸಲು ತಯಾರಾಗಿದ್ದವು. ಅಲ್ಲಿದ್ದ ಪ್ರಾಣಿಪಕ್ಷಿಗಳು ಮೌನವಾದವು. ಗಾಢವಾದ ಮೌನದ ಮಧ್ಯೆ ಸಣ್ಣದಾದ ಧ್ವನಿಯೊಂದು ಕೇಳಿಸಿತು. ಅದು ಪುಟ್ಟ ಹಕ್ಕಿಯ ಸ್ವರವಾಗಿತ್ತು. ಹಕ್ಕಿಯು ಭಯದಿಂದ 'ಮಹಾರಾಜ, ನಿನ್ನ ಆಜ್ಞೆಯನ್ನು ತಪ್ಪದೇ ಪಾಲಿಸುತ್ತೇವೆ. ಆದರೆ ತಮ್ಮಲ್ಲಿ ಒಂದು ವಿನಂತಿಯೆಂದರೆ, ನಿಮ್ಮ ಸೇನಾಪತಿಯೂ ಸೈನಿಕರೂ ಮೊದಲು ತಮ್ಮಾಜ್ಞೆಯನ್ನು ಪಾಲಿಸಿ ಆದರ್ಶರಾಗಬೇಕೆಂದು ಅಪ್ಪಣೆಯನ್ನು ಹೊರಡಿಸಿ' ಎಂದಿತು.

ಹಕ್ಕಿಯ ಮಾತುಗಳನ್ನು ಕೇಳಿ ಕತ್ತೆಗೆ ಕೋಪ ಬಂದಿತು. ಆ ಹಕ್ಕಿಯನ್ನು ಹಿಡಿದು ವಿಚಾರಣೆಯನ್ನು ಮಾಡಲು ನ್ಯಾಯಧೀಶರನ್ನು ನೇಮಿಸಿತು. ಆದರೆ ನ್ಯಾಯಧೀಶರು ಎತ್ತಿನ ಜಾತಿಯು ಮೊಟ್ಟೆಯನ್ನು ಇಡುವ ಅವಶ್ಯಕತೆಯಿಲ್ಲವೆಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಹಕ್ಕಿಯು ಕತ್ತೆ ರಾಜನಿಗೆ ಅವಮಾನ ಮಾಡಿದುದಕ್ಕಾಗಿ ಮರಣದಂಡನೆಯನ್ನು ವಿಧಿಸಿದರು.